
## ನಿಸ್ಪೃಹನೆ

# ಬೆಂಗಳೂರಿನ ಬಕಾಸುರ ದಾಹಕ್ಕೆ ಲಿಂಗನಮಕ್ಕಿ ತುತ್ತಾಗಬೇಕೆ?

ಲಿಂಗನಮಕ್ಕಿಯಿಂದ ಬೆಂಗಳೂರಿಗೆ ನೀರು ಹರಿಸುವ ಯೋಚನೆ ಸ್ಥಳೀಯರಿಗೆ ಅನೈತಿಕವಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಸರ್ಕಾರದ ಚಿಂತನೆಯ ಬಗ್ಗೆ ಈಗಾಗಲೇ ಮಲೆನಾಡಿಗರಿಂದ ವಿರೋಧ ವ್ಯಕ್ತವಾಗಿದೆ. 'ಸೇವ್ ಶರಾವತಿ' ಶೀರ್ಷಿಕೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಭಟನೆ ದಾಖಲಾಗುತ್ತಿದೆ.



ಈಶ್ವರ

ಶರಾವತಿ ನದಿಯ ಲಿಂಗನಮಕ್ಕಿ ಜಲಾಶಯದಿಂದ ಬೆಂಗಳೂರಿಗೆ ಕುಡಿಯುವ ನೀರು ತರುವ ರಾಜ್ಯ ಸರ್ಕಾರದ ಚಿಂತನೆ ಅವೈಜ್ಞಾನಿಕ ಹಾಗೂ ದೂರದೃಷ್ಟಿಯ ಕೊರತೆ ಹೊಂದಿರುವಂತಹದ್ದು. 2031ರ ವೇಳೆಗೆ ರಾಜಧಾನಿಯ ಜನಸಂಖ್ಯೆ 2 ಕೋಟಿ ದಾಟುವ ನಿರೀಕ್ಷೆಯಿದೆ. ಜನಸಂಖ್ಯೆಯ ಹೆಚ್ಚಳಕ್ಕೆ ತಕ್ಕಹಾಗೆ ನೀರಿನ ಹೊಸ ಮೂಲಗಳನ್ನು ಹುಡುಕಹೊರಟಿರುವ ಸರ್ಕಾರದ ಕಣ್ಣು ಶರಾವತಿಯ ಮೇಲೆ ಬಿದ್ದಿದೆ. ಕಾವೇರಿ ಜಲಾನಯನ ಪ್ರದೇಶದ ಜೀವನಾಡಿಯಾದ ಕೊಡಗಿನ ಪರಿಸರದಲ್ಲಿ ಮಳೆ ಕಡಿಮೆಯಾಗುತ್ತಿರುವುದು ಕೂಡ ಹೊಸ ನೀರಿನ ಮೂಲಗಳತ್ತ ಸರ್ಕಾರ ದೃಷ್ಟಿಹಾಯಿಸಲು ಕಾರಣವಾಗಿದೆ.

ಲಿಂಗನಮಕ್ಕಿ ಜಲಾಶಯದಿಂದ 30 ಟಿಎಂಸಿ ನೀರನ್ನು ಬೆಂಗಳೂರಿಗೆ ತರುವ ಮೂಲಕ ಬೆಂಗಳೂರಿನ ದಾಹವನ್ನು ತಕ್ಕಮಟ್ಟಿಗೆ ಪರಿಹರಿಸಬಹುದೆನ್ನುವ ಚಿಂತನೆ ಸರ್ಕಾರದ್ದು. ಆದರೆ, ಬೆಂಗಳೂರಿಗೆ ನೀರಿನ ಹೊಸ ಆಕರಗಳನ್ನು ಹುಡುಕುವ ಹಿನ್ನೆಲೆಯಲ್ಲಿ ಲಿಂಗನಮಕ್ಕಿಯಿಂದ ನೀರು ಪಡೆಯುವ ಸಾಧ್ಯತೆಯ ಸಾಧಕ ಬಾಧಕಗಳನ್ನು ಸರ್ಕಾರ ಗಂಭೀರವಾಗಿ ಯೋಚಿಸಿದಂತಿಲ್ಲ. ಲಿಂಗನಮಕ್ಕಿಯ ನೀರು ವಿದ್ಯುತ್ ಉತ್ಪಾದನೆಗೆ ಬಳಕೆಯಾದ ನಂತರ ವ್ಯರ್ಥವಾಗಿ ಸಮುದ್ರ ಸೇರುತ್ತಿದೆ ಎನ್ನುವ ವಾದಕ್ಕೆ ಮನಸೋತಿರುವ ಸರ್ಕಾರ, ಸಮುದ್ರಮಟ್ಟದಿಂದ ಲಿಂಗನಮಕ್ಕಿಗಿಂತಲೂ ಬೆಂಗಳೂರು ಅತ್ಯಂತ ಎತ್ತರದಲ್ಲಿರುವ ವಾಸ್ತವನ್ನು ನಿರ್ಲಕ್ಷಿಸಿದೆ. ಬೆಂಗಳೂರಿಗೆ ನೀರು ಸರಬರಾಜು ಮಾಡಬೇಕಾದರೆ, ಸುಮಾರು 1500 ಅಡಿಯಷ್ಟು ಎತ್ತರಕ್ಕೆ ನೀರು ಎತ್ತಬೇಕು. ಹಾಗೆ ಎತ್ತಿದ ನೀರನ್ನು 430 ಕಿ.ಮೀ. ದೂರಕ್ಕೆ ಸಾಗಿಸಬೇಕು. ಲಿಂಗನಮಕ್ಕಿಯ ಗರಿಷ್ಠ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 1469 ಮೆಗಾವ್ಯಾಟ್. ಇದರ ಒಂದೂವರೆ ಪಟ್ಟು ವಿದ್ಯುತ್ ರಾಜಧಾನಿಗೆ ಒದಗಿಸಲಿಕ್ಕಾಗಿ ನೀರನ್ನು ಮೇಲೆತ್ತುವ ಪ್ರಕ್ರಿಯೆಗೆ ಬೇಕಾಗುತ್ತದೆ ಎನ್ನುವ ಅಂದಾಜಿದೆ. ಈ ಲೆಕ್ಕಾಚಾರವೇ ಯೋಜನೆ ಕಾರ್ಯಸಾಧುವಲ್ಲ ಎನ್ನುವುದನ್ನು ಸೂಚಿಸುವಂತಿದೆ.

ಕೊಳವೆಮಾರ್ಗದ ಮೂಲಕ ನೀರನ್ನು ತರುವ ಯೋಜನೆಗೆ ಸುಮಾರು 12 ಸಾವಿರ ಕೋಟಿ ರೂಪಾಯಿ ಖರ್ಚಾಗಬಹುದು ಎನ್ನಲಾಗಿದೆ. ಯೋಜನೆ ಮುಂದುವರಿದಂತೆ ಈ ಮೊತ್ತದ ಪ್ರಮಾಣ ಮತ್ತಷ್ಟು ಹೆಚ್ಚುತ್ತದೆ. ದುಡ್ಡನ್ನು ನೀರಿನಂತೆ ಖರ್ಚು ಮಾಡುವ ಯೋಜನೆಗಳು ರಾಜಕಾರಣಿಗಳು ಹಾಗೂ ಅಧಿಕಾರಿಗಳ ಪಾಲಿಗೆ ಯಾವಾಗಲೂ ಅತ್ಯಾಕರ್ಷಕವಾಗಿ ಕಾಣಿಸುತ್ತವೆ. ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುವ ಪ್ರಮೇಯ ಬಂದಾಗ ನದಿ ಬತ್ತುವ ಅಥವಾ ಕಾಡು ಬರಿದಾಗುವ ಆತಂಕಗಳು ನಮ್ಮ ನೀತಿ ನಿರೂಪಕರ ಪಾಲಿಗೆ ಮುಖ್ಯವಾಗುವುದಿಲ್ಲ ಎನ್ನುವುದಕ್ಕೆ ಲಿಂಗನಮಕ್ಕಿಯೂ ಎತ್ತಿನಹೊಳೆ ಯೋಜನೆಗಳೂ ಉದಾಹರಣೆಯಂತಿವೆ.

ಬೆಂಗಳೂರಿನ ಬಕಾಸುರ ದಾಹವನ್ನು ಪರಿಹರಿಸಲಿಕ್ಕಾಗಿ ರಾಜ್ಯದ ಇತರ ಕಡೆಗಳಲ್ಲಿನ ಜಲಮೂಲಗಳನ್ನು ಬಳಸಿಕೊಳ್ಳಲು ಯೋಚಿಸುವುದು ಅಗ್ಗದ ಜನಪ್ರಿಯ ತಂತ್ರ. ನೀರಿನ ಕೊರತೆಯ ಬಗ್ಗೆ ಗಂಭೀರವಾಗಿ ಯೋಚಿಸುವವರು ಸ್ಥಳೀಯ ಜಲಮೂಲಗಳ ಪುನಶ್ಚೇತನಕ್ಕೆ ಪ್ರಯತ್ನಿಸಬೇಕು. ಬೆಂಗಳೂರಿನ ಸಂಗತಿಯನ್ನೇ ನೋಡಿ. ನಗರದ ಬೆಳವಣಿಗೆಯ ಭರಾಟೆಯಲ್ಲಿ ನೂರಾರು ಕೆರೆಗಳು ಕಣ್ಮರೆಯಾಗಿವೆ. ಇರುವ ಕೆರೆಗಳು ಕಸ–ಕಲ್ಮಶಗಳನ್ನು ತುಂಬಿಕೊಳ್ಳುವ ಗಟಾರಗಳಾಗಿ ಬದಲಾಗಿವೆ, ಹೂಳಿನ ಬೊಜ್ಜಿನಿಂದ ನರಳುತ್ತಿವೆ. ಈ ಕೆರೆಗಳನ್ನು ಮೂಲಸ್ವರೂಪದಲ್ಲಿ ಉಳಿಸಿದರೆ ಅಂತರ್ಜಲದ ಮಟ್ಟ ಸಾಕಷ್ಟು ಸುಧಾರಿಸುತ್ತದೆ. ಮಳೆನೀರನ್ನು ಸಂಗ್ರಹಿಸುವುದನ್ನು ಅಥವಾ ಹಿಂಗಿಸುವುದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕವೂ ಸ್ವಲ್ಪಮಟ್ಟಿಗೆ ನೀರಿನ ಕೊರತೆಗೆ ಉತ್ತರ ಕಂಡುಕೊಳ್ಳಬಹುದು. ಸ್ಥಳೀಯ ಜಲಮೂಲಗಳ ಸಂರಕ್ಷಣೆಯ ಜೊತೆಗೆ, ರಾಜಧಾನಿಯ ಬೆಳವಣಿಗೆಗೆ ಕಡಿವಾಣ ಹಾಕುವ ಮೂಲಕವೂ ನೀರಿನ ಬೇಡಿಕೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಬಹುದು. ಇನ್ನುಮುಂದಾದರೂ, ರಾಜಧಾನಿಗೆ ಪರ್ಯಾಯವಾಗಿ ಜಿಲ್ಲಾಕೇಂದ್ರಗಳನ್ನು ಬೆಳೆಸುವ ವಿಕೇಂದ್ರೀಕರಣ ವಿಧಾನಕ್ಕೆ ಸರ್ಕಾರ ಮನಸು ಮಾಡಬೇಕು.

ಜಲಾಶಯದ ನಿರ್ಮಾಣ ಸಂದರ್ಭದಲ್ಲಿ ನಿರಾಶ್ರಿತರಾದ ಕೆಲವರಿಗೆ ಇನ್ನೂ ಸಮರ್ಪಕ ಪರಿಹಾರ ದೊರೆತಿಲ್ಲ ಎನ್ನುವ ದೂರುಗಳನ್ನು ಲಿಂಗನಮಕ್ಕಿಯಿಂದ ನೀರು ಕಸಿಯಲು ಉತ್ಸಾಹ ಹೊಂದಿರುವವರು ಗಮನಿಸಬೇಕು. ಮಲೆನಾಡಿನಲ್ಲೇ ನೀರಿನ ಕೊರತೆಯಿದೆ. ಜಲಾಶಯದ ಫಾಸಲೆಯಲ್ಲಿರುವ ಹೊಸನಗರ, ಸಾಗರ ತಾಲ್ಲೂಕುಗಳ ನೂರಾರು ಗ್ರಾಮಗಳಿಗೆ ಪ್ರಸ್ತುತ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ, ಲಿಂಗನಮಕ್ಕಿಯಿಂದ ಬೆಂಗಳೂರಿಗೆ ನೀರು ಹರಿಸುವ ಯೋಚನೆ ಸ್ಥಳೀಯರಿಗೆ ಅನೈತಿಕವಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಸರ್ಕಾರದ ಚಿಂತನೆಯ ಬಗ್ಗೆ ಈಗಾಗಲೇ ಮಲೆನಾಡಿಗರಿಂದ ವಿರೋಧ ವ್ಯಕ್ತವಾಗಿದೆ. 'ಸೇವ್ ಶರಾವತಿ' ಶೀರ್ಷಿಕೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಭಟನೆ ದಾಖಲಾಗುತ್ತಿದೆ. ಈ ವಿರೋಧವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಲಿಂಗನಮಕ್ಕಿಯನ್ನು ಅದರ ಪಾಡಿಗೆ ಬಿಟ್ಟು, ಬೆಂಗಳೂರನ್ನು ಜಲಸ್ವಾವಲಂಬಿಯಾಗಿಸುವ ಸ್ಥಳೀಯ ಸಾಧ್ಯತೆಗಳ ಬಗ್ಗೆ ಗಮನಹರಿಸಬೇಕು.

■ **ರಘುನಾಥ ಚ.ಹ.**